ಹೇಳುತ್ತಿದ್ದರು, ವೆಟೀರಿಯಲ್ಸ್ ಇಲ್ಲ. ಜೀಪುಗಳು ಇಲ್ಲ ಮೆಕಾನಿಕ್ಸ್ ಇಲ್ಲ ಎಂದು ಹೇಳುತ್ತಾರೆ. ಮಂತ್ರಿಗಳು ಆದಷ್ಟು ಬೇಗ ನೀರು ಸರಬರಾಜು ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮಾಣಾಭಿವೃದ್ಧಿ ಸಚಿವರು).—ಕರ್ನಾಟಕ ರಾಜ್ಯದಲ್ಲಿ ೨೭೦೨೮ ರೆವಿನ್ಯೂ ಗ್ರಾಮಗಳು ಇವೆ. ಇದರ ಜೊತೆಗೆ ೨೫೫೯ ಮಜಿರೆ ಗ್ರಾಮಗಳು ಸೇರಿ ಒಟ್ಟು ೫೨೬೪ ಗ್ರಾಮಗಳು ಇವೆ. ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಸಂಖ್ಯೆ ೨ ಕೋಟಿ ೬೬ ಲಕ್ಷ. ರಾಜ್ಯದಲ್ಲಿ ಒಟ್ಟು ೪೧೬೮ ನಲ್ಲಿ ನೀರು ಸರಬರಾಜು ಯೋಜನೆಗಳು, ೩೭೨೩ ಕಿರು ನೀರು ಸರಬರಾಜು ಯೋಜನೆಗಳು, ಹಾಗೂ ೧,೧೫,೬೯೪ ಕೈ ಪಂಪು ಅಳವಡಿಸಿದ ಕೊಳವೆ ಬಾವಿಗಳು ಕಾರ್ಯ ನಿರ್ವಹಿಸುತ್ತಿವೆ. ೧೯೯೦-೯೧ನೇ ಸಾಲಿನಲ್ಲಿ ೬೫೬ ನೀರು ಸರಬರಾಜು ಯೋಜನೆಗಳು ೭೧೮ ಕಿರು ನೀರು ಸರಬರಾಜು ಯೋಜನೆಗಳು ೨೮೨೪ ಕೈ ಪಂಪು ಜೋಡಿಸಿದ ಕೊಳವೆ ಬಾವಿ ಯೋಜನೆಗಳನ್ನು ೩೧೮೭.೯೯ ಲಕ್ಷ ರೂಪಾಯಿ ವೆಚ್ಚದಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದಮೇಲೆ ನೀರು ಸರಬರಾಜು ಯೋಜನೆಗಳು ದುರಸ್ತಿ ಮತ್ತು ನಿರ್ವಹಣೆ ಮಂಡಲ್ ಪಂಚಾಯತಿಗಳ ಕರ್ತವ್ಯವಾಗಿದೆ. ಆದಾಗ್ಯೂ ಹೆಚ್ಚಿನ ದುರಸ್ತಿ ಮತ್ತು ನಿರ್ವಹಣೆಯ ಕಾರ್ಯವನ್ನು ಜಿಲ್ಲಾ ಪರಿಷತ್ತು ಇಂಜಿನಿಯರಿಂಗ್ ವಿಭಾಗಗಳ ಮೂಲಕ ಕೈಗೊಳ್ಳಲಾಗುವುದು. ಅದಕ್ಕಾಗಿ ಪ್ರತಿ ತಾಲ್ಲೂಕಿನಲ್ಲಿ ಸರಾಸರಿ ೫೦೦ ಕೈ ಪಂಪುಗಳಿಗೆ ಒಂದು ವಾಹನ ಮತ್ತು ೫ ಜನ ತರಬೇತಿ ಪಡೆದ ಸಿಬ್ಬಂದಿಯನ್ನು ನೇಮಿಸಲಾಗಿದೆ. ಪ್ರತಿ ಪಂಪುಗಳ ದುರಸ್ತಿಗೆ ಮತ್ತು ನಿರ್ವಹಣೆಗೆ ೧೨೫ ರೂಪಾಯಿಯನ್ನು ಒದಗಿಸಲಾಗಿದೆ. ಗ್ರಾಮಮಟ್ಟದಲ್ಲಿ ಸಣ್ಣ ಪುಟ್ಟ ದುರಸ್ತಿ ಕಾರ್ಯವನ್ನು ನೋಡಿಕೊಳ್ಳಲು ಸ್ಥಳೀಯವಾಗಿ ತರಬೇತಿಯನ್ನು ಹಂತಹಂತವಾಗಿ ಕೊಡಲಾಗುವುದು. ದುರಸ್ತಿಗೆ ಬೇಕಾದ ಬಿಡಿಭಾಗಗಳನ್ನು ಮಂಡಲ್ ಪಂಚಾಯತಿಗಳು ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗದ ಉಗ್ರಾಣದಿಂದ ಖರೀದಿಸಬೇಕು. ಸಾಮಾನ್ಯವಾಗಿ ಕೈಪಂಪು ಕೆಟ್ಟು ಹೋದ ಒಂದು ವಾರ ಅಥವಾ ಹದಿನೈದು ದಿವಸದಲ್ಲಿ ಬಂದು ದುರಸ್ತಿ ಮಾಡಿ ಕೊಡಲಾಗುವುದು.

2 ಸುಳ್ಯ ತಾಲ್ಲೂಕು ಕೊಡಿಯಾಲ ಗ್ರಾಮದಲ್ಲಿ ಲಕ್ಷ್ಮೀ ಎನ್ನುವ ಹರಿಜನ ಹೆಣ್ಣು ಮಗಳಿಗೆ ಅಲ್ಲಿಯ ಶ್ರೀಮಂತ ಜಮೀನ್ದಾರರಿಂದ ಕಿರುಕುಳ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಕೊಡಿಯಾಲ ಗ್ರಾಮದಲ್ಲಿ ಸುಮಾರು ವರ್ಷಗಳಿಂದ ಶ್ರೀಮತಿ ಲಕ್ಷ್ಮಿ ಹೆಂಗ್ಸು ಹಾಗೂ ಇವರ ಕುಟುಂಬ ವಾಸ್ತವಿಸಿ ಕೊಂಡು ಬರುತ್ತಿದೆ. ಸದ್ರಿಯವರು ಬಡ ಹರಿಜನ ಕುಟುಂಬದವರಾಗಿರುತ್ತಾರೆ. ಈಕೆಯು ಸದ್ರಿ ಗ್ರಾಮದ ಸರಕಾರಿ ಭೂಮಿ ಸುಮಾರು ಒಂದು ಎಕ್ರೆಯಲ್ಲಿ ಟಿ–ಟಿ ದಂಡೆನೆ ಹಾಗೂ ಇತರ ಸ್ವಾಧೀನ ಅನುಭೋಗದಲ್ಲಿ ಸ್ಥಳವನ್ನು ಅನುಭವಿಸಿಕೊಂಡು ಬರುವುದಾಗಿದೆ. ಈ ವಿಧ್ಯೆ ಸದ್ರಿ ಗ್ರಾಮದ ಶ್ರೀಮಂತ ಜಮೀನ್ದಾರಿ ವ್ಯಕ್ತಿಗಳಾದ ಶ್ರೀ ನಾರಾಯಣ ನಾಯಕ್ ಹಾಗೂ ಇವರ ಮಕ್ಕಳಾದ ಶ್ರೀ ಕಮಾಲಾಕ್ಷ ನಾಯಕ್ ಉಪೇಂದ್ರನಾಯಕ ಮತ್ತು ಆನಂದ ನಾಯಕ್ ಹಾಗೂ ಇವರ ಮಕ್ಕಳು ಈ ಬಡ ಹರಿಜನ ಆಕ್ರಿದಾರರಿಗೆ ಆಗಾಗ ಕಿರುಕುಳ ಕೊಡುತ್ತಿದ್ದರು, ಪೋಲೀಸು ಠಾಣೆಗೆ ದೂರು ಪಗೈರೆ ಸಲ್ಲಿಸಿ, ಬಡ ಹರಿಜನ ಕುಟುಂಬಕ್ಕೆ ನ್ಯಾಯದೊರಕಿತ್ತು, ಆದರೆ ತಾರೀಖು ೧೯-೩-೧೯೯೦ರಂದು ರಾತ್ರಿ ಸಮಯದಲ್ಲಿ ಮೇಲೆ ಹೇಳಿದ ಶ್ರೀ ನಾರಾಯಣ ನಾಯಕ್ ಹಾಗೂ ಇವರ ಮಕ್ಕಳು ಕೆಲವು ಮಂದಿ ಗೂಂಡಾಗಳನ್ನು ಸೇರಿಸಿಕೊಂಡು ಬಡ ಹರಿಜನ ಹೆಂಗ್ಸ ತಮಗೆ ಸೇರಿದ ಸರಕಾರಿ ಜಮೀನಿನಲ್ಲಿ ಮುಳಿ ಚಾವಣಿ ಕಟ್ಟಿಡ ನಿರ್ಮಿಸಿ ಬಲಾತ್ಕಾರ ಪ್ರವೇಶ ಮಾಡಿರುತ್ತಾರೆ, ಅದುದರಿಂದ ಸದ್ರಿಯವರ ಮೇಲೆ ಕೂಡಲೇ ಕ್ರಮ ಕೈಗೊಂಡು ಬಲಾತ್ಕಾರ ಪ್ರವೇಶದಲ್ಲಿ ನಿರ್ಮಿಸಿದ ಕಟ್ಟಡವನ್ನು ತೆಗೆಯಿಸಿ, ಹರಿಜನ ಶ್ರೀಮತಿ ಲಕ್ಷ್ಮಿ ಹೆಂಗ್ಸು ಕುಟುಂಬಕ್ಕೆ ಸದ್ರಿ ಇವರ ಕಿರುಕುಳ ಹಾಗೂ ಗೂಂಡಾಗಳಿಂದ ರಕ್ಷಣೆ ನೀಡಬೇಕಾಗಿ ಕೋರುತ್ತೇನೆ.

SRI AZEEZ SAIT (Revenue Minister).—

Mr. Speaker Smt. Laksmi reported to have unauthorisedly occupied Government land measuring about 1 acre in Sy No. 151/1A of Kodial Village. The land in this Sy. No. form 'Kumki'

attached to the Kadimwarga lands of Shri Balakrishna Rai. Sri Narayan Naik and his sons, including Sri Upendra Naik are the tenants of Sri Balakrishna Rai. During the spot inspection by the Tahsildar, Sullya Taluk at 6.00 pm on 22-3-1990, both Smt Lakshmi and Sri Upendra Naik claimed that they are enjoying the same property. Sri Upendra Naik has erected some huts with thatched roof on the said land. Smt. Lakshmi has however, not effected any improvement or hut on the said land. As the land is the Government land, the Tahsildar has directed both the parties to the dispute not to enter upon the land. He has also directed Sri Upendra Naik to remove the huts put up by him by 23-3-1990. However as Smt. Lakshmi belongs to the Scheduled Caste community, the Tahsildar has directed the Station House Officer and Head Constable of the Police Out Post at Bellare to provide police protection to Smt Lakshmi. Smt. Lakshmi also holds the land in Sy. No. 151/1B adjacent to the disputed Sy. No. 151/1A, she has been cultivating her patta land on which she has a house.

3. ಚಿಕ್ಕಮಗಳೂರು ಜಿಲ್ಲೆಯ ಬಾಳೇಹೊನ್ನೂರು ಹತ್ತಿರ ಭದ್ರಾನದಿಗೆ ಮೇಲು ದಂಡೆಯ ಕೆಲಸದ ಪ್ರಗತಿ

ಶ್ರೀ ಯು. ಕೆ. ಶಾಮಣ್ಣ.—ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯ ಬಾಳೇಹೊನ್ನೂರು ಹತ್ತಿರ ನರಸಿಂಹರಾಜಪುರ ತಾಲ್ಲೂಕಿನ ಮೂಗುಂಡಿ ಹತ್ತಿರ ಭದ್ರಾ ನದಿಗೆ ಮೇಲುದಂಡೆ ಕಟ್ಟುವ ವಿಚಾರ ಯಾವ ಹಂತಕ್ಕೆ ಬಂದಿದೆ ಎಂಬ ವಿಚಾರ ತಿಳಿಯಪಡಿಸಬೇಕಾಗಿ ಕೋರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತರಿಸಿಕೊಡುತ್ತೇನೆ.

4. ೧೯೮೭-೮೮ನೇ ಸಾಲಿನಿಂದ ಕನ್ನಡ ಭಾಷೆಯಲ್ಲಿ ಪ್ರಕಟಗೊಂಡ ಗ್ರಂಥಗಳ ಸಗಟು ಖರೀದಿಗೆ ಇಟ್ಟ ೧೫ ಲಕ್ಷ ರೂಪಾಯಿಗಳನ್ನು ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ವರ್ಗಾವಣೆಗೆ ಒತ್ತಾಯ

† ಶ್ರೀ ಬಿ. ಎಂ. ಇದಿನಬ್ಬ —೧೯೮೭-೮೮ನೇ ಸಾಲಿನಿಂದ ಕನ್ನಡ ಭಾಷೆಯ ಸಣ್ಣ ಲೇಖಕರು, ಬರಹಗಾರರು ಮತ್ತು ಪ್ರಕಾಶಕರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಸರಕಾರ ಕನ್ನಡ ಭಾಷೆಯಲ್ಲಿ ಪ್ರಕಟಗೊಂಡ ಗ್ರಂಥಗಳನ್ನು ಸಗಟು ಖರೀದಿ ಯೋಜನೆಯನ್ವಯ ಖರೀದಿಸಲು ಹಾಗೂ ಮಂಡಲ ಗ್ರಂಥಾಲಯಗಳಿಗೆ ಒದಗಿಸುವ ಉದ್ದೇಶಕ್ಕಾಗಿ ವರ್ಷಕ್ಕೆ ೧೫ ಲಕ್ಷ ರೂಪಾಯಿಗಳನ್ನು ಯೋಜನಾ ವೆಚ್ಚದ ಅಡಿಯಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ತೆಗೆದಿರಿಸಲಾಗಿತ್ತು. ಈ ಯೋಜನೆಯ ಅನ್ವಯ ಪುಸ್ತಕಗಳನ್ನು ಖರೀದಿ ಮಾಡಲು ಸಮಿತಿಯೊಂದನ್ನೂ ರಚಿಸಲಾಗಿದ್ದಿತು. ಆ ಸಮಿತಿ ಯವರು ೧೯೮೭-೮೮ ಹಾಗೂ ೧೯೮೮-೮೯ರ ಸಾಲುಗಳಲ್ಲಿ ಸದರಿ ಯೋಜನೆಯ ಮೇರೆಗೆ ಪುಸ್ತಕಗಳನ್ನು ಖರೀದಿಸಿದ್ದರು. ಪ್ರಸ್ತುತ ವರ್ಷ ಅಂದರೆ ೧೯೮೯-೯೦ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ೧೫ ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಆದರೆ ಇದುವರೆಗೂ ಸಹ ಈ ಉದ್ದೇಶಕ್ಕಾಗಿ ಹೊಸ ಸಮಿತಿ ಯನ್ನು ಇನ್ನೂ ರಚಿಸದೆ ಇರುವುದರಿಂದ ಯಾವುದೇ ಪುಸ್ತಕಗಳನ್ನು ಖರೀದಿಸಲು ಸಾಧ್ಯವಾಗಿಲ್ಲ. ಈ ೧೫ ಲಕ್ಷ ರೂಪಾಯಿಗಳನ್ನು ಇದೇ ತಿಂಗಳ ಅಂದರೆ ಮಾರ್ಚಿ ೩೦ರೊಳಗಾಗಿ ವೀಸಲಾಗಿಟ್ಟಿರುವ ಉದ್ದೇಶಕ್ಕೆ ಉಪಯೋಗಿಸಬೇಕಾಗಿದೆ. ಸಮಯದ ಅಭಾವದ ಕಾರಣ ಈಗ ಸಮಿತಿಯನ್ನು ರಚಿಸಲು ಸಾಧ್ಯವಾಗದೆ ಹೋದಲ್ಲಿ, ಈ ಹಣವನ್ನು ರಾಜ್ಯ ಗ್ರಂಥಾಲಯ ಪ್ರಾಧಿಕಾರ ನಿಧಿಗೆ ವರ್ಗಾಯಿಸಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಮುಂದಿನ ತಿಂಗಳ ಒಳಗಾಗಿ ಕನ್ನಡ ಪುಸ್ತಕಗಳ ಖರೀದಿಗಾಗಿ ಉಪ ಯೋಗಿಸಿ ಕೊಳ್ಳಬಹುದು. ಆದಕಾರಣ ಸರಕಾರದವರು ಕೂಡಲೇ ಈ ಹಣವನ್ನು ಸಾರ್ವಜನಿಕ